3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಸಿ.ಸಿ.ನಂ. **699/2019**

ದಿನಾಂಕಃ **07.08.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಬಿಂದು | ಚಾಸಾ-8, ಪ್ರಾಸ.-8 |
| ತಂದೆಯ ಹೆಸರು ಃ | ಚಂದ್ರಪ್ಪ | |
| ವಯಸ್ಸು ಃ | 25 ವರ್ಷ | |
| ಉದ್ಯೋಗ ಃ | ಗೃಹಿಣಿ | |
| ವಾಸ ಃ | ಅಂತರಘಟ್ಟೆ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ನನ್ನ ಮಾವ. ಚಾಸಾ-2 ನನ್ನ ತಂದೆ. ಚಾಸಾ-7 ನನ್ನ ತಾಯಿ. ಆರೋಪಿತರು ನನಗೆ ಗೊತ್ತು ಅವರು ನಮ್ಮ ಊರಿನವರು. 2017 ನೇ ಸಾಲಿನಲ್ಲಿ ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಚಾಸಾ-1 ರವರು ಮನೆಗೆ ಬಂದು ಚಾಸಾ-2 ರವರಿಗೆ ಆರೋಪಿತರು ಹೋಟೆಲ್ ಹಿಂಭಾಗ ಹಲ್ಲೆ ಮಾಡಿರುತ್ತಾರೆ ಎಂದು ವಿಚಾರ ತಿಳಿಸಿರುತ್ತಾರೆ. ನಾನು, ಚಾಸಾ-1 ಮತ್ತು 7 ರವರು ಹೋಗಿ ನೋಡಿದಾಗ ಚಾಸಾ-2 ರವರು ಗೋಡೆಗೆ ಒರಗಿ ಕುಳಿತಿದ್ದರು. ಅವರ ತಲೆಗೆ, ಕೈಗೆ, ಎದೆಗೆ, ಬೆನ್ನಿಗೆ ಗಾಯವಾಗಿತ್ತು. ಕೇಳಿದಾಗ ಚಾಸಾ-2 ರವರು ಆರೋಪಿತರು ಬಾಟಲಿಯಿಂದ ಎದೆಗೆ, ಕಲ್ಲಿನಿಂದ ತಲೆಗೆ, ಬೆನ್ನಿಗೆ ಹಲ್ಲೆ ಮಾಡಿರುವ ವಿಚಾರ ತಿಳಿಸಿರುತ್ತಾರೆ. ರೂ. 20 ಸಾಲದ ವಿಚಾರವಾಗಿ ಹಲ್ಲೆ ಮಾಡಿರುತ್ತಾರೆ. ಚಾಸಾ-2 ರವರನ್ನು ನಾನು, ಚಾಸಾ-1 ಮತ್ತು 7 ರವರು ಬೀರೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-2 ರವರ ಎದೆಯಲ್ಲಿ ಬೀಯರ್ ಬಾಟಲ್ ನ ಚೂರು ಉಳಿದಿತ್ತು. ಘಟನೆ ಸಂಬಂಧ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಪರ ವಕೀಲರು ಆತನ ಗುರುತಿಸುವಿಕೆ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ 21.06.2017 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಗಲಾಟೆಯಾದ ವಿಚಾರವನ್ನು ಚಾಸಾ-1 ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪಾಟೀಸವಾಲುಃ **2** ನೇ ಆರೋಪಿ ಪರ ಶ್ರೀ ಎಂ. ಬಿ ವಕೀಲರಿಂದಃ

ಗಲಾಟೆಯು ಯಾವ ದಿನಾಂಕದಂದು ನಡೆಯಿತು ಎಂದು ನನಗೆ ನಿಖರವಾಗಿ ಹೇಳಲಾಗುವುದಿಲ್ಲ ಆದರೆ ಘಟನೆಯು 2017 ರಲ್ಲಿ ನಡೆದಿರುತ್ತದೆ. ಘಟನೆಯು ಎಷ್ಟು ಗಂಟೆಯಿಂದ ಎಷ್ಟು ಗಂಟೆವರೆಗೆ ನಡೆದಿರುತ್ತದೆ ಎಂದು

ಹೇಳಲಾಗುವುದಿಲ್ಲ. ಘಟನೆಯನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ನನ್ನ ತಂದೆಯವರಿಗೆ ಕುಡಿಯುವ ಅಭ್ಯಾಸ ಇದೆ ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಚಾಸಾ-2 ರವರಿಗೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರೇ ಕುಡಿದು ಬಿದ್ದು ಗಾಯಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ನನ್ನ ಮದುವೆ ಆಗಿರಲಿಲ್ಲ. ಆ ಸಮಯದಲ್ಲಿ ನಾನು ನಮ್ಮ ಮನೆಯಲ್ಲಿ ವಾಸವಾಗಿದ್ದೆ. ಘಟನಾ ಸ್ಥಳಕ್ಕೂ ಚಾಸಾ-1 ರವರ ಮನೆಗೂ ಸ್ವಲ್ಪ ದೂರ ಇರುತ್ತದೆ ಅಂದರೆ 10 ರಿಂದ 15 ಮನೆಗಳ ನಂತರ ಘಟನಾ ಸ್ಥಳ ಇರುತ್ತದೆ. ಘಟನೆಯನ್ನು ಚಾಸಾ-1 ರವರು 5.20 ಗಂಟೆಗೆ ಬಂದು ತಿಳಿಸಿರುತ್ತಾರೆ. ಘಟನೆ 5.00 ಗಂಟೆಗೆ ನಡೆದಿರಬಹುದು. ನಾನು ಹೇಳಿದ ರೀತಿ ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ಸ್ವರ್ಣಾಂಭ ಬಾರ್ ಮುಂಭಾಗದಲ್ಲಿ ನಡೆದಿರುತ್ತದೆ. ಸ್ವರ್ಣಾಂಭ ಬಾರ್ ಕೆದಿಗೆರೆ ರಸ್ತೆಯಲ್ಲಿ ಬರುತ್ತದೆ. ಅಲ್ಲಿ ಯಾವುದೇ ಬಾರ್ ಇರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಬೀರೂರು ಆಸ್ಪತ್ರೆಗೆ 6.30 ಗಂಟೆಗೆ ಹೊರಟಿರುತ್ತೇವೆ. ಆಸ್ಪತ್ರೆಗೆ 7.00 ರಿಂದ 7.15 ಗಂಟೆಗೆ ತಲುಪಿರುತ್ತೇವೆ. ಘಟನೆ ನಡೆದ ಸ್ಥಳಕ್ಕೂ ಆಸ್ಪತ್ರೆಗೂ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ-2 ರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಕುಡಿದು ಬಿದ್ದು ಮಾಡಿಕೊಂಡ ಗಾಯವನ್ನು ಗುಣಪಡಿಸಲು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆಯೇ ಹೊರತು ಆರೋಪಿತರು ಹಲ್ಲೆ ಮಾಡಿದ ಕಾರಣಕ್ಕಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು ಆರೋಒಪಿತರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮೇಲಿನ ದ್ವೇಷದಿಂದ ಅವರಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ತಪ್ಪಿನಿಂದ ಗಲಾಟೆ ಆಗದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಬೀಯರ್ ಬಾಟಲುಗಳು ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸರಿ.

( 1 ನೇ ಆರೋಪಿ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ )

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.